Fax: 08282-256262
E-mail:kuvempuacademic@gmail.com
Phone No - 08282-256149
Website :www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ,
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

**Re-Accredited by NAAC with "A" Grade, Ranked 73rd place in NIRF-2019 & 45th Place at National Level in SCIMAGO Rankings**

ಸಂಖ್ಯೆ:ಕುವಿ:ಶೈವಿ:ಎಸಿ–6: 1392 :2023–24 ದಿನಾಂಕ:05–07–2023.

## ಸುತ್ತೋಲೆ –2

ವಿಷಯ: 2022–23ನೇ ಸಾಲಿನ ವಿವಿಧ ಸ್ನಾತಕ ಪದವಿಗಳ 3ನೇ ಮತ್ತು 5ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಪ್ರವೇಶಾನುಮೋದನೆ ಕುರಿತು.

ಉಲ್ಲೇಖ: 1. ವಿಶ್ವವಿದ್ಯಾಲಯ ಸುತ್ತೋಲೆ ಸಂಖ್ಯೆ: ಕುವಿ:ಶೈವಿ:ಎಸಿ:617:2023–24 ದಿನಾಂಕ:20–05–2023.
2. ಮಾನ್ಯ ಕುಲಸಚಿವರ ಅನುಮೋದನೆ ದಿನಾಂಕ:03–07–2023

****

ವಿಶ್ವವಿದ್ಯಾಲಯದ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜಿಗಳಿಗೆ 2022–23ನೇ ಶೈಕ್ಷಣಿಕ ಸಾಲಿನ 3 ಮತ್ತು 5ನೇ ಸೆಮಿಸ್ಟರ್ ಪ್ರವೇಶಾತಿ ಸಂಬಂಧ ಉಲ್ಲೇಖಿತ ಸುತ್ತೋಲೆಯನ್ವಯ ಪ್ರವೇಶಾನುಮೋದನೆ ಮಾಡುವ ಕುರಿತು ಎಲ್ಲಾ ದಾಖಲಾತಿಗಳನ್ನು ಪ್ರಾಂಶುಪಾಲರ ದೃಢೀಕರಣದೊಂದಿಗೆ ದಿನಾಂಕ:29–05–2023ರೊಳಗೆ ವಿಶ್ವವಿದ್ಯಾಲಯಕ್ಕೆ ಹಾರ್ಡ್ ಕಾಪಿಯನ್ನು ತುರ್ತಾಗಿ ಸಲ್ಲಿಸಲು ತಿಳಿಸಲಾಗಿತ್ತು. ಆದರೆ, ಇದುವರೆವಿಗೂ ಸದರಿ ವಿದ್ಯಾರ್ಥಿಗಳ ಪ್ರವೇಶಾನುಮೋದನೆ ಕುರಿತು ಕೆಲವು ಕಾಲೇಜುಗಳು 1ರಿಂದ 9ರವರೆಗಿನ ಅನುಬಂಧಗಳು, ಪ್ರವೇಶಾತಿ ಪಟ್ಟಿ ಮತ್ತು ಯು.ಯು.ಸಿ.ಎಂ.ಎಸ್ ಮೂಲಕ ವಿದ್ಯಾರ್ಥಿಗಳು ಪ್ರವೇಶ ಶುಲ್ಕ ಪಾವತಿಸಿರುವ ಪಟ್ಟಿ (Third semester students wise payment report), ವಿದ್ಯಾರ್ಥಿಗಳು ಕಾಲೇಜು ಬದಲಾವಣೆ ಕುರಿತು ವಿಶ್ವವಿದ್ಯಾಲಯದಿಂದ ಅನುಮೋದನೆ ಪಡೆದಿರುವ ಪ್ರತಿಯನ್ನು ಪ್ರಾಂಶುಪಾಲರ ದೃಢೀಕರಣದೊಂದಿಗೆ ಸಲ್ಲಿಸಿರುವುದಿಲ್ಲ.

ಈಗಾಗಲೇ 2023–24ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಪ್ರಕ್ರಿಯೆ ಪ್ರಾರಂಭವಾಗಿರುತ್ತದೆ. ಆದರೆ, 2022–23ನೇ ಶೈಕ್ಷಣಿಕ ಸಾಲಿನ ಪ್ರವೇಶಾನುಮೋದನೆ ಪ್ರಕ್ರಿಯೆ ಮೇಲ್ಕಂಡ ಕಾರಣದಿಂದ ವಿಳಂಬವಾಗುತ್ತಿದೆ. 3 ಮತ್ತು 5ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಪ್ರವೇಶಾನುಮೋದನೆ ಪಟ್ಟಿಯನ್ನು ಪರೀಕ್ಷಾ ವಿಭಾಗಕ್ಕೆ ಕಳುಹಿಸಲು ಸಾಧ್ಯವಾಗದೆ ಮುಂದೆ ತಾಂತ್ರಿಕ ತೊಂದರೆಗಳು ಉದ್ಭವಿಸಬಹುದಾದ ಸಾಧ್ಯತೆ ಇರುತ್ತದೆ. ಕಾಲೇಜುಗಳಿಂದ ಸ್ವೀಕೃತವಾದ ಎಲ್ಲಾ ಶುಲ್ಕಗಳ ವಿವರಗಳನ್ನು ವಿಶ್ವವಿದ್ಯಾಲಯವು ಲೆಕ್ಕಪರಿಶೋಧನೆಗೂ ಒದಗಿಸಬೇಕಾಗಿರುತ್ತದೆ. ಕಾಲೇಜುಗಳು ವಿವರಗಳನ್ನು ನೀಡಲು ಮಾಡುತ್ತಿರುವ ಸುಧೀರ್ಘ ವಿಳಂಬದಿಂದಾಗಿ ವಿದ್ಯಾರ್ಥಿಗಳಿಗೆ ಮತ್ತು ವಿಶ್ವವಿದ್ಯಾಲಯದ ಆಡಳಿತಕ್ಕೆ ಅಡಚಣೆಗಳು ಉಂಟಾಗುತ್ತದೆ.

ಆದ್ದರಿಂದ ಎಲ್ಲಾ ಸಂಯೋಜಿತ ಕಾಲೇಜಿನ ಪ್ರಾಂಶುಪಾಲರುಗಳು ಈ ವಿಷಯವನ್ನು **ಪ್ರಥಮ ಆದ್ಯತೆ** ಮೇರೆಗೆ ಪರಿಗಣಿಸಿ 2022–23ನೇ ಸಾಲಿನ 3 ಮತ್ತು 5ನೇ ಸೆಮಿಸ್ಟರ್‌ನ ಪ್ರವೇಶಾತಿ ವಿವರಗಳನ್ನು ನಿಗದಿತ ನಮೂನೆಯಲ್ಲಿ ಮತ್ತು ದಾಖಲಾತಿಗಳೊಂದಿಗೆ ದಿನಾಂಕ:15–07–2023ರೊಳಗೆ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ. ಈ ವಿಷಯದಲ್ಲಿ ಮತ್ತಷ್ಟು ವಿಳಂಬವಾದಲ್ಲಿ, ಮುಂದೆ ಆಗುವ ಪ್ರತಿಕೂಲ ಪರಿಣಾಮಗಳಿಗೆ ಆಯಾ ಕಾಲೇಜಿನ ಪ್ರಾಂಶುಪಾಲರುಗಳನ್ನು ಹೊಣೆಗಾರರನ್ನಾಗಿ ಪರಿಗಣಿಸಲಾಗುವುದೆಂದು ತಿಳಿಸಲಾಗಿದೆ.

07/07/23

ಉಪಕುಲಸಚಿವ
ಶೈಕ್ಷಣಿಕ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577451
ಶಿವಮೊಗ್ಗ ಜಿಲ್ಲೆ

5/7/2023
5/7/23
5/7/23

ಗೆ,

ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಶಿವಮೊಗ್ಗ/ಚಿಕ್ಕಮಗಳೂರು ಜಿಲ್ಲೆ ಎಲ್ಲಾ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

**ಪ್ರತಿಗಳು:**

1. ನೋಡಲ್ ಅಧಿಕಾರಿಗಳು– ಎನ್.ಇ.ಪಿ.–2020, ಸ್ನಾತಕೋತ್ತರ ಭೂ ವಿಜ್ಞಾನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ. – ಮಾಹಿತಿಗಾಗಿ
2. ಕಛೇರಿ ಪ್ರತಿ.